ಬೇಕು ಅಂತ ಒಂದು ಲಿಸ್ಟ್ ಕೊಡು ವಾರಿ, ಅದನ್ನೆಲ್ಲ ಸುಧಾ ಮಾಡಿ ಹಾಕುತ್ತಾಳೆ. ನೀನು ಈಗ್ಲೇ ಹೊರಟುಬಿಟ್ಟರೆ ವೀರೂ ಪೆಚ್ಚಾಗಿ ಬಿಡುತ್ತಾನೆ. ಅವನಿಗೆ ನಮ್ಮನೆ ಒಗ್ಗುವ ತನಕ ನೀನು ಇರಲೇಬೇಕು. ಅವನಿಗೆ ನಿಧಾನವಾಗಿ ತಿಳಿ ಹೇಳಿ ಇಲ್ಲಿ ಇರಲು ಮಾನಸಿಕವಾಗಿ ಸಿದ್ಧಗೊಳಿಸು. ನೀನು ಹೋದ ಮೇಲೆ ನಾಲ್ಕು ದಿನ ಮಂಕಾಗಿರಬಹುದು, ಆಮೇಲೆ ಹೊಸ ಶಾಲೆ, ಹೊಸ ಫ್ರೆಂಡ್ಸ್ ಅಂತ ಸರಿಹೋಗುತ್ತಾನೆ. ಮನೆಯಲ್ಲಿ ತರುಣ್–ವರುಣ್ ಇರುತ್ತಾರೆ. ಅವರ ಜೊತೆ ಆಟಪಾಠಗಳ ನಡುವೆ ನಿಮ್ಮೂರಿನ ನೆನಪೇ ಆಗಲ್ಲ ನೋಡು ಅವನಿಗೆ. ಆದರೆ ಭಾವಂದಿರು, ಅಕ್ಕ ಏನು ಅಂದುಕೊಳ್ಳುತ್ತಾರೊ ಅಂತ ಭಯ ಅಷ್ಟೆ' ಎಂದು ಆತಂಕದಿಂದ ನುಡಿದ.

'ಅವರು ಏನಾದರೂ ತಿಳಿದುಕೊಳ್ಳಲಿ ಅಣ್ಣ, ಅದಕ್ಕೆಲ್ಲ ನೀನು ತಲೆಕೆಡಿಸಿಕೊಳ್ಳಬೇಡ, ಅವರ ಕೋಪ–ಸಿಟ್ಟಿಗಿಂತ ನನಗೆ ವೀರೂ ಭವಿಷ್ಯವೇ ಮುಖ್ಯ. ಅವನು ಚೆನ್ನಾಗಿ ಓದಿ ಡಾಕ್ಟರಾದ ಮೇಲೆ ಅವರಿಗೆ ಗೊತ್ತಾಗುತ್ತೆ ನಾನು ಮಾಡಿದ್ದು ಸರಿ ಅಂತ' ಎಂದು ಭರವಸೆ ತುಂಬಿದಳು.

'ನಿನಗೆ ಆ ಭರವಸೆ ಇದ್ರೆ ಸಾಕು, ನನಗೆ ನಿನ್ನ ಆಸೆ, ನಿನ್ನ ಕನಸು ಅಷ್ಟೆ ಮುಖ್ಯ. ಅದರ ಮುಂದೆ ಭಾವಂದಿರ ಕೋಪ ಯಾವ ಲೆಕ್ಕ ನನಗೆ, ಮೊದಲು ನೀನು ಹೋಗಿ ಸುಧಾರಿಸಿಕೋ, ಊರಿಗೆ ಹೋಗುವುದೇನಾದರೂ ಒಂದು ವಾರದ ನಂತರವೇ...'

ಅಣ್ಣನ ಮಾತುಗಳು ಹಿತ ನೀಡಿ 'ಆಯ್ತಣ್ಣ, ನನಗೂ ಊರಿಗೆ ಹೋಗಿ ಅವರ ಕೋಪ ಎದುರಿಸುವ ಧೈರ್ಯ ಸದ್ಯಕ್ಕೆ ಇಲ್ಲ. ರಾತ್ರಿಯೆಲ್ಲ ನಿದ್ದೆ ಇಲ್ಲ, ಈಗ ಮಲಗಿಕೊಳ್ತೀನಿ' ಅಂತ ಕೋಣೆಗೆ ಹೋದಳು.

ಅಣ್ಣನ ಭರವಸೆ, ಆಶ್ವಾಸನೆ ಸಿಕ್ಕಿದ್ದರಿಂದ ವಾರಿಜಳಿಗೆ ಇಷ್ಟು ದಿನಗಳ ಚಿಂತೆ ಮರೆಯಾಗಿ ನೆಮ್ಮದಿ ಎನಿಸಿತು. ಮಲಗಿದ ಕೂಡಲೇ ನಿದ್ರೆಯೂ ಆವರಿಸಿಬಿಟ್ಟಿತು. ಎಚ್ಚರವಾದಾಗ ಇಡೀ ಮನೆಯಲ್ಲಿ ಮಕ್ಕಳ ಗದ್ದಲ ತುಂಬಿಹೋಗಿತ್ತು. ವೀರೂನಿನ ಆರ್ಭಟವೂ ತರುಣ್ ಮತ್ತು ವರುಣರ ಆರ್ಭಟದ ಜೊತೆ ಸೇರಿಕೊಂಡು ಮನೆಯೇ ಎದ್ದು ಕುಣಿಯುತ್ತಿದೆ ಅಂತ ಭಾಸವಾಗಿ ಎದ್ದು ಕುಳಿತಳು. 'ಏಯ್, ಅತ್ತೆ ಮಲಗಿದ್ದಾರೆ, ಕೂಗಾಡಬೇಡಿರೊ' ಅಂತ ಅತ್ತಿಗೆ ಹೇಳುತ್ತಿರುವುದನ್ನು ಕೇಳಿಸಿಕೊಳ್ಳುತ್ತಲೇ ಹೊರ ಬಂದಳು ವಾರಿಜ. ವೀರೂ ಎಲ್ಲವನ್ನು ಎಲ್ಲರನ್ನು ಮರೆತು ಅಣ್ಣನ ಮಕ್ಕಳೊಂದಿಗೆ ಆಡುತ್ತಿರುವುದು ನೆಮ್ಮದಿ ತರಿಸಿತ್ತು. ಇನ್ನು ಯೋಚನೆ ಇಲ್ಲ. ತಾನು ಧೈರ್ಯವಾಗಿ ಮಗನನ್ನು ಇಲ್ಲಿ ಯಾವ ಆತಂಕವಿಲ್ಲದೆ ಬಿಟ್ಟು ಹೋಗಬಹುದೆಂದು ಅನ್ನಿಸಿ ಮನಸ್ಸಿಗೆ ಸಮಾಧಾನವಾಯಿತು.

ನಾಲ್ಕು ದಿನ ಕಳೆದರೂ ಊರಿನಿಂದ ಯಾರೂ ಫೋನ್ ಮಾಡದಿದ್ದಾಗ ಮನೆಯವರ ಸಿಟ್ಟು ಕಡಿಮೆಯಾಗಿಲ್ಲ ಅನ್ನೋ ಸತ್ಯ ವಾರಿಜಳಿಗೆ ಅರಿವಾಗಿ ಮನಸ್ಸು ಅತ್ತ ಎಳೆಯತೊಡಗಿತು. ವೀರೂವಿಗೆ ಏನೇನೊ ಹೇಳಿ ಇಲ್ಲಿಯೇ ಇರಲು ಒಪ್ಪಿಸಿದ್ದಾಗಿತ್ತು. ಅಣ್ಣನ ಮಕ್ಕಳು ಹೋಗುತ್ತಿದ್ದ ಶಾಲೆಗೆ ಸೇರಿಸಿಯೂ ಆಗಿತ್ತು. ಹೊಸ ಶಾಲೆ, ಹೊಸ ಬಟ್ಟೆ, ಕರೆದೊಯ್ಯುವ ಸ್ಕೂಲ್ ವ್ಯಾನ್, ಹುಡುಗರೊಡನೆ ಆಡುವ ಕ್ರಿಕೆಟ್ ಆಟ, ಎಲ್ಲವನ್ನು ಕಂಡು ವೀರೂ ಬೆರಗಾಗಿ ಇಲ್ಲೇ ಇರಲು ಒಪ್ಪಿದ್ದ. ಆದರೂ ತಾನು ಹೋದ ಮೇಲೆ ಮನೆಯವರನ್ನು ನೆನೆದು ಊರಿಗೆ ಹೋಗುತ್ತೇನೆಂದು ಹಟ ಮಾಡಬಹುದೆಂದು ಭಯ ಇದ್ದೇ ಇತ್ತು. ಅಣ್ಣ, ಮನೆಯವರ ಅಗಲಿಕೆಯ ನೋವನ್ನು ಮರೆಸುವ ಪ್ರೀತಿ ತೋರಿಸಿ ಮನೆಯವರನ್ನು ಮರೆಸುವನೆಂದು ನಂಬಿಕೆಯೂ ಇತ್ತು. ಹಾಗಾಗಿ ಊರಿಗೆ ಹೋಗಬೇಕೆಂದು ನಿರ್ಧರಿಸಿ ಅಣ್ಣ ಅತ್ತಿಗೆ ಎಷ್ಟು ಬಲವಂತ ಮಾಡಿದರೂ ಒಪ್ಪದೆ, ವೀರು ಶಾಲೆಗೆ ಹೋಗಿದ್ದ ಸಮಯ ನೋಡಿ ಹೊರಟುಬಿಟ್ಟಳು.

ಮನೆಗೆ ಬಂದಾಗ ಸಂಜೆಯಾದ್ದರಿಂದ ಎಲ್ಲರೂ ಮನೆಯಲ್ಲಿಯೇ ಇದ್ದರು. ಆದರೆ ಯಾರೊಬ್ಬರೂ ವಾರಿಜಳನ್ನು ಮಾತನಾಡಿಸಲಿಲ್ಲ. ಅವಳ ಮಕ್ಕಳು ಅವಳನ್ನು ನೋಡಿದರಾದರೂ ಮಾತನಾಡಲು ಯಾಕೋ ಅಂಜುತ್ತಿರುವಂತೆ ಕಾಣಿಸಿತು. ಬ್ಯಾಗನ್ನು ಒಳಗಿರಿಸಿದ ವಾರಿಜ ಮತ್ತೆ ಹೊರಬಂದು ಮಕ್ಕಳ ಬಳಿ ಕುಳಿತುಕೊಂಡು 'ಇವತ್ತು ಸ್ಕೂಲಿಗೆ ಹೋಗಿದ್ರ?' ಅಂತ ತಾನೇ ಮಾತಾಡಿಸಿದಳು.

'ಹೂಂ ಅಮ್ಮ ಹೋಗಿದ್ದೆವು' ಅಂತ ಮೆಲ್ಲನೆ ನುಡಿದು ಮತ್ತೆ ಓದುವಂತೆ ತಲೆತಗ್ಗಿಸಿಕೊಂಡು ಬಿಟ್ಟಾಗ ಮಕ್ಕಳೇಕೊ ಹೆದರುತ್ತಾ ಇದ್ದಾರೆ, ಇರಲಿ ಅಂತ ಅಂದುಕೊಂಡು ಸೀದಾ ಅಡುಗೆ ಮನೆಗೆ ಶಾಂಭವಿಯನ್ನು ಹುಡುಕಿಕೊಂಡು ಹೋದಳು. ಅಡುಗೆ ಮಾಡುತ್ತಿದ್ದ ಶಾಂಭವಿ ವಾರಿಜಳನ್ನು ನೋಡಿ, 'ಬಾ ವಾರಿಜ, ಮಕ್ಳು ಹಸಿವು ಅಂತ ಇದ್ರು, ಅದಕ್ಕೆ ಅನ್ನಕ್ಕಿಡುತ್ತಿದ್ದೆ. ಇನ್ನೇನು ಅನ್ನ ಆಗಿಹೋಯಿತು, ಹಪ್ಪಳ ಕರಿದುಬಿಡುತ್ತೇನೆ. ನೀನೂ ಇಲ್ಲೇ ಊಟ ಮಾಡಿ ಬಿಡು' ಎಂದು ಮಾಮೂಲಿಯಂತೆ ನುಡಿದಾಗ ಸರಿ ಎಂಬಂತೆ ತಲೆ ಆಡಿಸಿದಳು. ಶಾಂಭವಿ ಮತ್ತೆ ಮಾತು ಬೆಳೆಸದೆ ತನ್ನ ಕೆಲಸದಲ್ಲಿ ನಿರತವಾದಾಗ ತಾನೇ ಎದ್ದು ಎಲ್ಲರಿಗೂ ಊಟ ಬಡಿಸಲು ತಟ್ಟೆಗಳನ್ನು ತೊಳೆದು ಚಾಪೆ ಹಾಕಿ ತಟ್ಟೆ ಹಾಕಿ ನೀರಿನ ಲೋಟ ಇರಿಸಿದಳು. ಅಷ್ಟರಲ್ಲಿ ಶಾಂಭವಿ ಎಲ್ಲರೂ ಊಟಕ್ಕೆ ಬನ್ನಿ ಅಂತ ಕೂಗು ಹಾಕಿದಳು. ಅದನ್ನೇ ಕಾಯುತ್ತಿದ್ದವರಂತೆ ಮಕ್ಕಳು ಓಡಿ ಬಂದರು. ಸಾಲಾಗಿ ಕುಳಿತುಕೊಳ್ಳುವಷ್ಟರಲ್ಲಿ ಮಾದು, ಜಗದೀಶರು ಇಬ್ಬರೂ ಒಟ್ಟಿಗೆ ಬಂದು ಕುಳಿತರು. ವಾರಿಜ ಎಲ್ಲರ ತಟ್ಟೆಗೂ ಅನ್ನ ಬಡಿಸಿದಳು, ಭಾವ ಕೂಡಾ ತನ್ನತ್ತ ತಿರುಗಿ ಯಾವಾಗ ಬಂದೆ ಅಂತನೂ ಕೇಳದೆ ಹೋದಾಗ ತುಂಬಾ ಪೆಚ್ಚಾಗಿ ಬಿಟ್ಟಳು. ಸಾರು ಬಡಿಸಲು ಬಂದ ಶಾಂಭವಿ, 'ನೀನೂ ಕುಳಿತು ಬಿಡು, ನಾನು ಬಡಿಸುತ್ತೇನೆ' ಅಂತ ಹೇಳಿ ಅವಳನ್ನು ಕೂರಿಸಿ ಅವಳಿಗೂ ಊಟ ಬಡಿಸಿದಳು. ಯಾರೊಬ್ಬರೂ ಮಾತನಾಡದೆ ಮೌನವಾಗಿ ಊಟ ಮುಗಿಸಿ ಎದ್ದು ಹೋದರು. ಅವರ ತಟ್ಟೆಗಳನ್ನೆಲ್ಲ ತೊಳೆದು, ಅಕ್ಕ ಕೂತ್ಕಳಿ ಅಂತ ಶಾಂಭವಿಗೆ ಊಟ ಬಡಿಸಿ ಅವಳ ಊಟ ಆಗುವ ತನಕ ಕಾದಿದ್ದು, ನಂತರ ಮನೆಗೆ ಬಂದಳು.

ತಮ್ಮ ಮಲಗುವ ಕೋಣೆಗೆ ಮಲಗೋಣ ಅಂತ ಹೋದರೆ ಬಾಗಿಲು ಹಾಕಿದ್ದನ್ನು ಕಂಡು ತಳ್ಳಿದಳು. ಒಳಗಿನಿಂದ ಚಿಲಕ ಹಾಕಿರುವುದು ಗೊತ್ತಾಗಿ, ಗಂಡನಿಗೆ ಕೋಪ ಜೋರಾಗಿಯೇ ಇದೆ ಅಂತ ಅಂದುಕೊಂಡು ಮಕ್ಕಳ ಕೋಣೆಗೆ ಹೋಗಿ ಮಕ್ಕಳು ಹಾಯಾಗಿ ಮಲಗಿರುವುದನ್ನು ನೋಡಿ ಹೊರಗೆ ಬಂದು ಕುಳಿತಳು. ವೀರೂ ಕೂಡಾ ಈಗ ಮಲಗಿರಬಹುದು, ನಾನಿಲ್ಲ ಅಂತ ಅದೆಷ್ಟು ಸಂಕಟಪಟ್ಟಿರುವನೋ, ನೆನಪಾಗಿ ವ್ಯಥೆಯಿಂದ ಕಣ್ಣು ಒದ್ದೆಯಾಯಿತು. ಮದುವೆ ಆಗಿ ಇಷ್ಟು ವರ್ಷಗಳಲ್ಲಿ ಇದೇ ಪ್ರಥಮ ಬಾರಿಗೆ ಗಂಡ ಕೋಣೆಯ ಬಾಗಿಲು ಹಾಕಿಕೊಂಡು ನಿನಗೆ ಪ್ರವೇಶವಿಲ್ಲ ಅಂತ ಹೇಳಿರುವುದು... ಹಿಂದೆಲ್ಲ ಅದೆಷ್ಟು ಸಲ ಜಗಳವಾಡಿಲ್ಲ, ಅದೆಷ್ಟು ಸಲ ಅವರಿಗೆ ಬೇಸರವಾಗುವಂತೆ ನಡೆದುಕೊಂಡಿಲ್ಲ, ಆಗೆಲ್ಲ ನನಗೆ ಬೈದು ಕೋಪ ಮಾಡಿಕೊಂಡು ಬೆಳಿಗ್ಗೆ ಹೊತ್ತಿಗೆ ಸರಿ ಹೋಗಿ ವಾರಿಜ ಅಂತ ಬಂದುಬಿಡುತ್ತಿದ್ದವನು ಇವತ್ತು ಕೋಣೆಯ ಬಾಗಿಲು ಹಾಕಿಕೊಂಡು ಮಲಗಿದ್ದಾನೆ ಅಂದರೆ ತನ್ನ ಮೇಲೆ ಅದೆಷ್ಟು ಕೋಪ ಬಂದಿರಬೇಕು, ಅದೆಷ್ಟು ದಿನ ಈ ಕೋಪ ನೋಡೋಣ, ವೀರೂ ಅಲ್ಲಿ ಹೊಂದಿಕೊಂಡು ಚೆನ್ನಾಗಿ ಓದಿ ನನ್ನಿಷ್ಟದಂತೆ ಡಾಕ್ಟರು ಆದ ಮೇಲೆ ಗೊತ್ತಾಗುತ್ತೆ.

ಇಲ್ಲಿದ್ದಷ್ಟು ದಿನ ವೀರೂ ಮನೆ ತುಂಬಾ ಇರುವ ಹೆಣ್ಣುಮಕ್ಕಳ ಜೊತೆ ಸೇರಿಕೊಂಡು ಅವರಂತೆ ಹೆಣ್ಣುಮಕ್ಕಳ ಬಟ್ಟೆ ಬರೆ ಹಾಕಿಕೊಂಡು ನನ್ನ ಹೊಟ್ಟೆ ಉರಿಸಿ, ಮನೆ ರಣರಂಗ ಮಾಡುತ್ತಿದ್ದ. ನನ್ನ ಕೋಪವೂ ಈಗ ಇರುವುದಿಲ್ಲ, ಇನ್ನು ಮೇಲೆ ಮನೆಯಲ್ಲಿ ನೆಮ್ಮದಿ. ಹೇಗಾದರೂ ಮಾಡಿ ಮನೆಯವರಿಗೆ ನನ್ನ ಮೇಲಿರುವ ಕೋಪ ಕಡಿಮೆಯಾಗುವಂತೆ ಮಾಡಬೇಕು, ಹೇಗೆ ಅವರ ಕೋಪ ಕಡಿಮೆ ಮಾಡುವುದು ಅಂತ ಚಿಂತಿಸುತ್ತಲೇ ಇಡೀ ರಾತ್ರಿ ಕಳೆಯಿತು. ಇಡೀ ರಾತ್ರಿ ಕುಳಿತೇ ಕಾಲ ತಳ್ಳಿ ಬೆಳಗಾಗುತ್ತಿದ್ದಂತೆ ಮಕ್ಕಳಿಗೆ ಹೊತ್ತಾಗುವುದೆಂದು ತಿಂಡಿ ಮಾಡಲು ಅನುವಾದಳು. ಮಕ್ಕಳನ್ನು ಏಳಿಸಿ ಅವರನ್ನು ಸಿದ್ಧವಾಗುವಂತೆ ತಿಳಿಸಿ, ಗಂಡನನ್ನು ಏಳಿಸಲು ಹೋದರೆ ಅವನಾಗಲೇ ಎದ್ದು ಹೊರ ಹೋಗಿರುವುದು ಕಂಡಿತು. ತೋಟಕ್ಕೆ ಹೋಗಿರಬೇಕೆಂದು ಭಾವಿಸಿ ಮಕ್ಕಳಿಗೆ ತಿಂಡಿ ಕೊಟ್ಟು, ಬಾಕ್ಸಿಗೆ ಹಾಕಿ ಕಳುಹಿಸಿಕೊಟ್ಟಳು. ಗಂಡ ಬಂದ ಮೇಲೆ ತಿಂಡಿ ತಿಂದರಾಯಿತು ಅಂತ ಬೇರೆ ಕೆಲಸದಲ್ಲಿ ನಿರತಳಾದಳು. ಮನೆಯಲ್ಲಿ ತಾನು ಬರುವ ತನಕ ಅಡುಗೆ ಮಾಡದಿದ್ದರೂ ಮಕ್ಕಳು ಅಪ್ಪನೊಡನೆ ಸೇರಿ ಇಡೀ ಮನೆಯನ್ನು ಕಸದ ತೊಟ್ಟಿ ಮಾಡಿದ್ದರು. ಬಟ್ಟೆಗಳು ಚೆಲ್ಲಾಪಿಲ್ಲಿ ಆಗಿದ್ದವು, ಹಾಸಿಗೆ ಹೊದಿಕೆ, ಸೋಫಾ, ದಿವಾನ ಕವರುಗಳು ಎಲ್ಲೆಲ್ಲಿ ಬೇಕೊ ಅಲ್ಲಲ್ಲಿ ಬಿದ್ದು ಒದ್ದಾಡುತ್ತಿದ್ದವು. ಅವೆಲ್ಲವನ್ನು ಸರಿಪಡಿಸುವ ಹೊತ್ತಿಗೆ ವಾರಿಜಳಿಗೆ ಸಾಕು ಸಾಕಾಯಿತು. ಅದೆಷ್ಟೋ ಹೊತ್ತಿನ ನಂತರ ಮನೆ ಮೊದಲಿನ ಸ್ವರೂಪ ಪಡೆದುಕೊಂಡಾಗ ಸಮಾಧಾನ ಅನ್ನಿಸಿ, ಸ್ನಾನ ಮುಗಿಸಿ, ಗಂಡ ಇಷ್ಟು ಹೊತ್ತಾದರೂ ಬಂದಿಲ್ಲವಲ್ಲ ಅಂತ ಹೊರ